ಕರ್ನಾಟಕ ಸರ್ಕಾರ

ಏಪ್ರಿಲ್ 24, 2016

**ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ**
**ಪುಂಡಲೀಕ ಹಾಲಂಬಿ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ**

**ಬೆಂಗಳೂರು, ಏಪ್ರಿಲ್ 24 :**

ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಪುಂಡಲೀಕ ಹಾಲಂಬಿ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕನ್ನಡ ಭಾಷೆಯ ಬಗ್ಗೆ ಅಪಾರ ಪ್ರೀತಿ ಇದ್ದ ಹಾಲಂಬಿ ಅವರಲ್ಲಿ ಕನ್ನಡತನದ ಬಗ್ಗೆ ನೈಜ ಕಳಕಳಿಯೂ ಇತ್ತು. ಕನ್ನಡ ಮಾಧ್ಯಮದಲ್ಲಿನ ವ್ಯಾಸಂಗ ಮಕ್ಕಳಲ್ಲಿ ಭಾಷಾಭಿಮಾನ ಮೂಡಿಸುತ್ತದೆ ಎಂಬ ಸ್ಪಷ್ಟ ನಿಲುವು ಹಾಲಂಬಿ ಅವರದಾಗಿತ್ತು. ತಮ್ಮ ಅಧಿಕಾರಾವಧಿಯಲ್ಲಿ ಸಾಹಿತ್ಯ ಪರಿಷತ್‌ನ ಶತಮಾನೋತ್ಸವ ಸಂಭ್ರಮವನ್ನು ಆಚರಿಸಿದ ಕೀರ್ತಿ ಹಾಲಂಬಿ ಅವರದು.

ಹಾಲಂಬಿ ಅವರ ಷಷ್ಟ್ಯಾಬ್ದಿ ಪೂರ್ತಿ ಸಮಾರಂಭದ ಸವಿ ನೆನಪುಗಳು ಇನ್ನೂ ನನ್ನ ಮನದಲ್ಲಿ ಹಸಿರಾಗಿರುವಾಗಲೇ ಅವರ ಹಠಾತ್ ನಿಧನ ನನ್ನಲ್ಲಿ ಅತೀವ ದುಃಖ ಹಾಗೂ ನೋವನ್ನು ಉಂಟು ಮಾಡಿದೆ.

ಪುಂಡಲೀಕ ಹಾಲಂಬಿ ಅವರ ನಿಧನ ಕನ್ನಡ ನಾಡಿಗೆ ಅಪಾರ ನಷ್ಟವನ್ನು ಉಂಟು ಮಾಡಿದೆ. ಹಾಲಂಬಿ ಅವರ ಕನ್ನಡಾಭಿಮಾನವನ್ನು ಕನ್ನಡಿಗರು ಸದಾ ಸ್ಮರಿಸುವುದು ಸೂಕ್ತ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**********

ಡಿ ಪಿ ಎಂ